7. ಮಂಗಳೂರು-ಬಜ್ಪೆ-ಕಟೀಲು ಬೆಳ್ಳಣಿ ರಸ್ತೆಯ —ಅದೇ—
ಕಿಮೀ 8.00ರಿಂದ 17.00 ಕಿಮೀವರೆಗೆ ಆಯ್ದ
ಭಾಗಗಳಲ್ಲಿ ಅಭಿವೃದ್ಧಿ ಮತ್ತು ಡಾಂಬರೀಕರಣ
6.50 ಲಕ್ಷ ರೂ.ಗಳು.

8. ಕಳವೂರು-ಜೋಕಟ್ಟೆ ರಸ್ತೆಯ ಕಿಮೀ 1.20ರಿಂದ —ಅದೇ—
ಮೋರಿಯ ತಡೆಗೋಡೆ ನಿರ್ಮಾಣ 1.00 ಲಕ್ಷ ರೂ.

9. ಮಂಗಳೂರು-ಬಜ್ಪೆ-ಕಟೀಲು ಬೆಳ್ಳಣಿ ರಸ್ತೆ ಕಿಮೀ —ಅದೇ—
20.50ರಿಂದ 22.00 ಕಿ.ಮೀವರೆಗೆ ಆಯ್ದ
ಭಾಗಗಳಲ್ಲಿ ಅಭಿವೃದ್ಧಿ (4.00 ಲಕ್ಷ ರೂ.ಗಳು)

10. ಸುರತ್ಕಲ್ ಬಜ್ಪೆ ರಸ್ತೆಯ ಕಿಮೀ 5.20ರಿಂದ —ಅದೇ—
6.00 ಕಿಮೀವರೆಗೆ ಅಭಿವೃದ್ಧಿ (ರೂ. 4.00 ಲಕ್ಷ)

ಇ) ಸದರಿ ಕಾರ್ಯಕ್ರಮವನ್ನು 95-96ರ ವರ್ಷಾಂತ್ಯದಲ್ಲಿ ಕಾರ್ಯ ರೂಪಕ್ಕೆ ತಂದಿದ್ದರಿಂದ ಕಾಮಗಾರಿಗಳ ಅಂದಾಜು ಮಂಜೂರಾತಿ ಟೆಂಡರು ಪ್ರಕಟಣೆ ಟೆಂಡರು ಅನುಮೋದನೆ ಮುಂತಾದ ಕ್ರಮಗಳಿಂದ ಕಾಮಗಾರಿ ಆರಂಭಿಸಲು ವಿಳಂಬವಾಯಿತು. ಅಲ್ಲದೆ ಸರಬರಾಜಿನಲ್ಲಿ ಸಹ ತೈಲ ಕಂಪನಿಗಳಿಂದ ವಿಳಂಬವಾಯಿತು.

ವಿಷಯ:- ಉ.ಕ.ಜಿಲ್ಲೆಯಲ್ಲಿ ಮೀನುಗಾರರಿಗೆ ಸಾಮೂಹಿಕ ವಸತಿ ಯೋಜನೆ ಜಾರಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 612 (186)

ಶ್ರೀ ಡಾ: ಎಂ.ಪಿ.ಕರ್ಕಿ (ಕುಮಟಾ):- ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಮೀನುಗಾರರಿಗೆ ಸಾಮೂಹಿಕ ವಸತಿ ಯೋಜನೆಯಡಿಯಲ್ಲಿ ತೆಗೆದುಕೊಂಡ ಯೋಜನೆಗಳ ಸಂಖ್ಯೆ ಎಷ್ಟು?

ಆ) ಅರ್ಹ ಫಲಾನುಭವಿಗಳು ಸಾಕಷ್ಟು ಸಂಖ್ಯೆಯಲ್ಲಿ ಇದ್ದರೂ ಹಾಗೂ ಕೇಂದ್ರ ಸರ್ಕಾರದಿಂದ ಆರ್ಥಿಕ ನೆರವು ದೊರೆಯುತ್ತಿದ್ದರೂ ಸಹ ಪ್ರಗತಿ ಕುಂಠಿತವಾಗಲು ಕಾರಣಗಳೇನು?

ಇ) ಈ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ನಿರ್ಲಕ್ಷ ತೋರಿದ

ಅಧಿಕಾರಿಗಳು : ನೌಕರರ ವಿರುದ್ಧ ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು):-

ಅ) 3 (ಮೂರು).

ಆ) ಮಾಜಾಲಿ - ಕಾರವಾರ ತಾಲ್ಲೂಕು: 1992-93ರಲ್ಲಿ 99 ಮನೆಗಳನ್ನು ಕಟ್ಟಲು ಆದೇಶಿಸಿದ್ದು, 72 ಮನೆಗಳನ್ನು ಪೂರ್ಣಗೊಳಿಸಲಾಗಿದ್ದು, ಫಲಾನುಭವಿಗಳ ವಶಕ್ಕೆ ನೀಡಲಾಗಿದೆ. ಉಳಿದ 27 ಮನೆಗಳ ನಿರ್ಮಾಣ ಪ್ರಗತಿಯಲ್ಲಿದೆ.

ಶಿರಾಲಿ - ಭಟ್ಕಳ್ ತಾಲ್ಲೂಕು: 1995-96ರ ಅಂತ್ಯದಲ್ಲಿ 12 ಮನೆಗಳನ್ನು ನಿರ್ಮಾಣ ಮಾಡಲು ಆದೇಶ ನೀಡಲಾಗಿದ್ದು ಸಧ್ಯದಲ್ಲಿ ಈ ಕಾಮಗಾರಿಯನ್ನು ಪ್ರಾರಂಭಗೊಳಿಸಲಾಗುವುದು.

ಅಳ್ವೆದಂಡೆ - ಕುಮಟಾ ತಾಲ್ಲೂಕು: 1995-96ರ ಅಂತ್ಯದಲ್ಲಿ 30 ಮನೆಗಳನ್ನು ನಿರ್ಮಾಣ ಮಾಡಲು ಆದೇಶ ನೀಡಿದ್ದು, 1996-97ರಲ್ಲಿ ಈ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಫಲಾನುಭವಿಗಳು ಕನಿಷ್ಠ 10ರ ಗುಂಪು ನಿವೇಶನಗಳನ್ನು ಪ್ರತಿ ಹಳ್ಳಿಯಲ್ಲಿಯೂ ಹೊಂದದೇ ಇದ್ದುದರಿಂದ, ಹಾಗೂ ಅಗತ್ಯವಾದ ನಿವೇಶನಗಳನ್ನು ಪಡೆಯುವಲ್ಲಿ ಕೆಲವು ತೊಂದರೆಗಳನ್ನು ಕಂಡು ಬಂದಿದ್ದರಿಂದ ಕಾಮಗಾರಿಯನ್ನು ತೆಗೆದುಕೊಳ್ಳುವಲ್ಲಿ ವಿಳಂಬವಾಗಿದೆ.

ಇ) ಉದ್ಭವಿಸುವುದಿಲ್ಲ.

ವಿಷಯ:- ಮೈಸೂರಿನ ಒಳಾಂಗಣ ಕ್ರೀಡಾಂಗಣದ ಕಳಪೆ ಕಾಮಗಾರಿ ಬಗ್ಗೆ.